ಕರ್ನಾಟಕ ಸರ್ಕಾರ
ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಆರೋಗ್ಯ ಸೌಧ, 7ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು-560023
ದೂರವಾಣಿ ಸಂ: 22536200, E-mail: ed.sast-hfw@karnataka.gov.in

ಆಕುಕ/ಎಸ್ಎಎಸ್‌ಟಿ/ಆಡಳಿತ/129/21-22 ದಿನಾಂಕ: 13-05-2022

# ನೇಮಕಾತಿ ಅಧಿಸೂಚನೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಂಗ ಸಂಸ್ಥೆಯಾದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಹಾಗೂ ಇತರೆ ಸಂಬಂಧಿತ ಆರೋಗ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಯೋಜನೆಗಳ ಯಶಸ್ವಿ ಅನುಷ್ಠಾನಕ್ಕಾಗಿ ಉನ್ನತ ವ್ಯಾಸಂಗ ಹೊಂದಿರುವ ವೈದ್ಯರು Preauthorization ಮತ್ತು Claimsನ್ನು ಇತ್ಯರ್ಥ ಮಾಡಲು ಅವಶ್ಯಕತೆ ಇರುತ್ತದೆ.

| S. N | Post Name | No. of Post | Qualification | Experience | Salary |
|---|---|---|---|---|---|
| 1. | Executive Doctors (Work on prorata basis) | 35 | MBBS with PG | Minimum 15 years of experience in Medical/ Administration Field with adequate computer knowledge | On Prorata Basis (Details are enclosed in Annexure-1) |

1. **ನೇಮಕಾತಿ:**

**ಅಭ್ಯರ್ಥಿಯು ನೇರ ಸಂದರ್ಶನಕ್ಕೆ ಹಾಜರಾಗುವಾಗ ಈ ಕೆಳಗಿನ ಎಲ್ಲಾ ದಾಖಲಾತಿಗಳ ದೃಢೀಕೃತ ಎರಡು ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.**

1. ಸಂದರ್ಶನಕ್ಕೆ ಹಾಜರಾಗುವಾಗ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಅರ್ಜಿ ನಮೂನೆಯ ಎರಡು ಪ್ರತಿಯನ್ನು ಕಡ್ಡಾಯವಾಗಿ ಭರ್ತಿ ಮಾಡಿ ತರುವುದು.
2. ಅಭ್ಯರ್ಥಿಯ ಸ್ವಯಂ ವಿವರ.
3. ಎರಡು ಪಾಸ್‌ಪೋರ್ಟ್ ಅಳತೆಯ ಫೋಟೋಗಳು.
4. ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರ, ಪದವಿ ಹಾಗೂ ಸ್ನಾತಕೋತ್ತರ ಪದವಿಯ ಎಲ್ಲಾ ಅಂಕಪಟ್ಟಿಗಳ ದೃಢೀಕೃತ ಪ್ರತಿ.
5. ಸಂಬಂಧಿಸಿದ ಸಂಸ್ಥೆಗಳಿಂದ ಪಡೆದ ಅನುಭವ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿ.
6. ಅಭ್ಯರ್ಥಿಯ ಗುರುತಿನ ಪುರಾವೆ(ಆಧಾರ ಕಾರ್ಡ/ವೋಟರ್ ಐಡಿ/ಡ್ರೈವಿಂಗ್ ಲೈಸೆನ್ಸ್ ಇತ್ಯಾದಿ.)
7. ಸಂದರ್ಶನದ ಸಂದರ್ಭದಲ್ಲಿ ಅಭ್ಯರ್ಥಿಗಳಿಗೆ ಕಂಪ್ಯೂಟರ್ ಪರೀಕ್ಷೆಯನ್ನು ನಡೆಸಲಾಗುವುದು.
8. ಹುದ್ದೆಗಳ ಹೆಚ್ಚಿನ ವಿವರಗಳಿಗಾಗಿ ಕಛೇರಿ ವೆಬ್‌ಸೈಟ್ http://arogya.karnataka.gov.in/sast/ ನಲ್ಲಿ ವೀಕ್ಷಿಸಬಹುದಾಗಿದೆ.
9. ಆಯ್ಕೆಯಾದ ವೈದ್ಯರು ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಸಲ್ಲಿಸುವುದು.

2. **ಷರತ್ತು ಮತ್ತು ನಿಬಂಧನೆಗಳು:**

1. ಅಭ್ಯರ್ಥಿಗಳು ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ ಮತ್ತು ಸೇವಾ ಅನುಭವವನ್ನು ಹೊಂದಿರತಕ್ಕದ್ದು.
2. ಅಭ್ಯರ್ಥಿಗಳು ಕಡ್ಡಾಯವಾಗಿ ಕನ್ನಡ ಜ್ಞಾನವನ್ನು (ಓದಲು ಮತ್ತು ಬರೆಯಲು) ಹೊಂದಿರತಕ್ಕದ್ದು.
3. ಆರೋಗ್ಯ ಹಾಗೂ ಸರಕಾರಿ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿರುವ ಅನುಭವವುಳ್ಳ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

Rkp

3. **ಹಕ್ಕುತ್ಯಾಗ:**

1. ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ಉದ್ಯೋಗ ಹಕ್ಕನ್ನು ಪಡೆಯಲು ಅರ್ಹರಾಗುವುದಿಲ್ಲ.
2. ಆಯ್ಕೆಯಾದ ವೈದ್ಯರ ಕಾರ್ಯಕ್ಷಮತೆಯನ್ನು ಪರಿಶೀಲಿಸಿ, ಮುಂದಿನ ವರ್ಷಕ್ಕೆ ಕರಾರನ್ನು ಮುಂದುವರೆಸಲಾಗುತ್ತದೆ.
3. ಈ ನೇಮಕಾತಿ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೇ ಯಾವುದೇ ಹಂತದಲ್ಲಿ ಹಿಂದಕ್ಕೆ ಪಡೆಯುವ/ರದ್ದು ಪಡಿಸುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರವು ಹೊಂದಿರುತ್ತದೆ.
4. ಅಭ್ಯರ್ಥಿಗಳ ಪರವಾಗಿ ಅಥವಾ ಆಯ್ಕೆ /ನೇಮಕಾತಿಗೆ ಸಂಬಂಧಿಸಿದಂತೆ ರಾಜಕೀಯ ಅಥವಾ ಇತರ ಹೊರಗಿನ ಪ್ರಭಾವವನ್ನು ತರಲು ಯಾವುದೇ ಅವಕಾಶವಿರುವುದಿಲ್ಲ. ಅಂತಹ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
5. ಸುಳ್ಳು ಅಥವಾ ತಪ್ಪಾದ ಮಾಹಿತಿಗಳನ್ನು ನೇಮಕಾತಿ ಉದ್ದೇಶಕ್ಕಾಗಿ ಬಳಸಿದ್ದಲ್ಲಿ ಅಂತಹ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳದೇ ತಿರಸ್ಕರಿಸಲಾಗುವುದು ಹಾಗೂ ಅವರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು.
6. ನೇರ ಸಂದರ್ಶನಕ್ಕೆ ಬರುವ ವೈದ್ಯರು ತಮ್ಮ ಪ್ರಯಾಣ ಹಾಗೂ ಇನ್ನಿತರೆ ವೆಚ್ಚಗಳನ್ನು ಸ್ವಯಂ ಭರಿಸುವುದು. ಈ ಕಛೇರಿಯಿಂದ ಯಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ.

ಮೇಲೆ ತಿಳಿಸಿದ ಎಲ್ಲಾ ದಾಖಲಾತಿಗಳೊಂದಿಗೆ ಈ ಕೆಳಗೆ ತಿಳಿಸಿದ ಸ್ಥಳ ಮತ್ತು ದಿನಾಂಕಗಳಂದು ನೇರ ಸಂದರ್ಶನಕ್ಕೆ ಹಾಜರಾಗಲು ಸೂಚಿಸಲಾಗಿದೆ.

| | |
|---|---|
| **ಸಂದರ್ಶನದ ಸ್ಥಳ** | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ<br>ಆರೋಗ್ಯ ಸೌಧ, 7ನೇ ಮಹಡಿ,<br>ಮಾಗಡಿ ರಸ್ತೆ, ಬೆಂಗಳೂರು-560023 |
| **ಸಂದರ್ಶನ ದಿನಾಂಕ** | 20-05-2022 |
| **ನೊಂದಣಿ ಅವಧಿ** | ಬೆಳಿಗ್ಗೆ 10.00 ರಿಂದ 12.00 ಗಂಟೆಯೊಳಗೆ (12.00 ಗಂಟೆ ನಂತರ ನೊಂದಾವಣೆಗೆ ಅವಕಾಶವಿರುವುದಿಲ್ಲ) |
| **ಸಂದರ್ಶನದ ಅವಧಿ** | ಮಧ್ಯಾಹ್ನ 12.00 ರಿಂದ ಸಂಜೆ 4.00ಗಂಟೆಯವರೆಗೆ |
| **ಕಂಪ್ಯೂಟರ್ ಪರೀಕ್ಷೆ** | ಸಂಜೆ 4.00 ರಿಂದ 5.00ಗಂಟೆಯವರೆಗೆ |

13/5/22
**ಕಾರ್ಯಕಾರಿ ನಿರ್ದೇಶಕರು,**
ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್,
ಬೆಂಗಳೂರು.

ಅನುಬಂಧ-1

# PRORATA CHARGES - WORK FROM HOME VALIDATORS

| | 2A | 2B | 3A | 4A | Covid |
|---|---|---|---|---|---|
| MBBS | 30 | 60 | 60 | 60 | 70 |
| MBBS/MD/PG(less than 3 years experience) | 30 | 65 | 65 | 65 | 70 |
| MBBS/MD/PG(more than 3 years experience) | 30 | 70 | 70 | 70 | 70 |
| MBBS/MD/PG(more than 3 years experience) beyond the minimum target except secondary cases | | | 100 | 100 | |

13/05/2022

I/C Director (MM)